# ಸುದೀರ್ಘ ಧ್ವನಿ ಪಯಣ



ಕಳೆದ ವಾರ ತಮ್ಮ 83ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಆಶಾ ಭೋಸ್ಲೆ, ಬಾಲಿವುಡ್ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವದ ಗಾಯಕಿ. ತರುಣಿಯರನ್ನೂ ನಾಚಿಸುವಂತೆ ಈಗಲೂ ಸ್ಟೇಜ್ ಷೋ ನೀಡುವ ಆಶಾ ಭೋಸ್ಲೆಯವರದ್ದು ಸದಾ ಜೀವಂತಿಕೆ ಪುಟಿವ ವ್ಯಕ್ತಿತ್ವ. 16ರ ತರುಣಿಗೂ ಮತ್ತು 50ರ ಮಹಿಳೆಗೂ ಒಪ್ಪುವಂತಹ ಧ್ವನಿಯಲ್ಲಿ ಹಾಡಬಲ್ಲ ಸಾಮರ್ಥ್ಯ ಅವರದ್ದು. ಹಾಗೆಯೇ ಬಾರ್ ಡ್ಯಾನ್ಸ್‌ಗೂ ವಿರಹಗೀತೆಗೂ ಅವರು ಏಕಪ್ರಕಾರವಾಗಿ ಧ್ವನಿ ತುಂಬಬಲ್ಲರು. 1971ರಲ್ಲಿ ಹೊರಬಂದ ಸಿನಿಮಾ ಕ್ಯಾರವಾನ್ ಚಿತ್ರದ 'ಪಿಯ ತೂ ಅಬ್ ತೊ ಆಜಾ...' ಎನ್ನುವ ಅವರ ಹಾಡು ಇವತ್ತಿಗೂ ಎವರ್‌ಗ್ರೀನ್. ಹಾಗೆಯೇ 1978ರಲ್ಲಿ 'ಡಾನ್' ಚಿತ್ರಕ್ಕೆ ಹಾಡಿದ 'ಯೆ ಮೇರಾ ದಿಲ್' ಕೂಡಾ ಅಷ್ಟೇ ಜನಪ್ರಿಯ. ಇವತ್ತಿಗೂ ಆಶಾ ಅವರ ಬಗ್ಗೆ ಏನೂ ಗೊತ್ತಿಲ್ಲದೆ ಅವರ ಧ್ವನಿಯನ್ನು ಮಾತ್ರ ಕೇಳಿಸಿಕೊಂಡವರಿಗೆ ಧ್ವನಿಯ ಆಧಾರದಲ್ಲಿ ವಯಸ್ಸು ಹೇಳೋದು ಕಷ್ಟ.

ಬಾಲಿವುಡ್‌ನಲ್ಲಿ ಆಶಾಜೀ ಹಿನ್ನೆಲೆ ಗಾಯಕಿಯಾಗಿ ಬಂದದ್ದು 1950ರಲ್ಲಿ. ಆಗ ಆಕೆಗೆ 17 ವರ್ಷ. ಅದಕ್ಕೂ ಒಂದು ವರ್ಷ ಮುಂಚೆ, 16ರ ಹರೆಯದಲ್ಲಿ ಆಕೆ ತನ್ನ ಕಾರ್ಯದರ್ಶಿ ಗಣಪತರಾವ್ ಭೋಸ್ಲೆ ಯನ್ನು ಪ್ರೀತಿಸಿ ಮನೆಬಿಟ್ಟು ಓಡಿಹೋದದ್ದು ದೊಡ್ಡ ಸುದ್ದಿ. ಏಕೆಂದರೆ ಗಣಪತರಾವ್‌ಗೆ ಆಗ ವಯಸ್ಸು 31 ದಾಟಿತ್ತು. ಅಕ್ಕ ಲತಾ ಮಂಗೇಶ್ಕರ್, ಇಷ್ಟು ವರ್ಷಗಳ ಬಳಿಕ ಇವತ್ತಿಗೂ ತಂಗಿಯ ಬಗ್ಗೆ ಸಣ್ಣ ಅಸಮಾಧಾನ ಹೊಂದಿದ್ದರೆ ಅದಕ್ಕೆ ಅದೇ ಘಟನೆ ಕಾರಣ. ಗಣಪತರಾವ್ ಹೆಂಡತಿಯನ್ನು ಸರಿಯಾಗಿ ಬಾಳಿಸಲಿಲ್ಲ ಎನ್ನುವುದು ಇಡೀ ಜಗತ್ತಿಗೇ ಗೊತ್ತಾದ ಗುಟ್ಟು. ಹೆಂಡತಿಯನ್ನು ಹಿನ್ನೆಲೆ ಸಂಗೀತ ಕ್ಷೇತ್ರಕ್ಕೆ ದೂಡಿದ್ದೇ ಆತ. 'ಇನ್ನು ನಾನು ಹಾಡುವುದಿಲ್ಲ' ಎಂದು ಪತ್ನಿ ಎಷ್ಟೇ ಹೇಳಿದರೂ ಆತ ಕೇಳಿಸಿಕೊಳ್ಳಲಿಲ್ಲ. ಆರಕ್ಕೇರದ, ಮೂರಕ್ಕಿಳಿಯದ ಈ ಸಂಸಾರದಲ್ಲಿ ಅತ್ತೆ–ಮಾವನ ಕಿರುಕುಳ ಅನುಭವಿಸಿದ ಆಶಾ, ಮೂರು ಮಕ್ಕಳಿಗೆ ಜನ್ಮ ಕೊಟ್ಟರು. 'ನನಗೆ ಮನೆಯೊಡತಿಯಾಗಿ ಅಡುಗೆ ಮಾಡುವುದೆಂದರೆ ತುಂಬ ಇಷ್ಟ. ನಾನು ಹಾಡುವುದನ್ನು ಕೈಬಿಟ್ಟು ಅಡುಗೆ ಕೆಲಸಕ್ಕೇ ಸೇರಬೇಕು ಎಂದುಕೊಂಡಿದ್ದೆ' ಎಂದೊಮ್ಮೆ ಗಣಪತರಾವ್ ಮನೆಯಿಂದ ಹೊರದಬ್ಬಲ್ಪಟ್ಟ ಬಳಿಕ ಸಂದರ್ಶನವೊಂದರಲ್ಲಿ ಆಶಾ ಅವರು ಹೇಳಿದ್ದುಂಟು!

ಗಂಡ ಮನೆಯಿಂದ ಹೊರದಬ್ಬಿದ ಬಳಿಕ ಸಿನಿಮಾ ಹಿನ್ನೆಲೆ ಗಾಯನವೇ ಆಶಾ ಅವರ ಕೈಹಿಡಿದಿತ್ತು. 1960ರಲ್ಲಿ ಗಂಡನಿಂದ ಪರಿತ್ಯಕ್ತಳಾದಾಗ ಜತೆಯಲ್ಲಿ ಇದ್ದದ್ದು ಇಬ್ಬರು ಪುಟ್ಟ ಮಕ್ಕಳು ಮಾತ್ರವಲ್ಲ, ಹೊಟ್ಟೆಯಲ್ಲಿದ್ದ ಇನ್ನೊಂದು ಮಗುವೂ! ಆ ಬಳಿಕ 20 ವರ್ಷಗಳ ಅವಧಿ ಆಶಾ ಅವರ ಛಲ ಮತ್ತು ಕ್ರಿಯಾಶಕ್ತಿಗೆ ಸಾಣೆ ಕೊಟ್ಟದ್ದು ಸುಳ್ಳಲ್ಲ. ತೀವ್ರ ಸ್ಪರ್ಧೆ ಇದ್ದ ಹಿನ್ನೆಲೆ ಗಾಯನ ಕ್ಷೇತ್ರದಲ್ಲಿ ಒಂದೊಂದೇ ಮೆಟ್ಟಿಲೇರುತ್ತಾ, ತನ್ನದೇ ಆದ ಶೈಲಿಯನ್ನು ಹುಡುಕಿಕೊಂಡು ಗಟ್ಟಿ ನೆಲೆ ಕಂಡುಕೊಂಡದ್ದು ದೊಡ್ಡ ಸಾಹಸಗಾಥೆ. (ಅಕ್ಕ ಲತಾ ಕೂಡಾ ಆಗ ತಂಗಿಯ ಅವಕಾಶಗಳನ್ನು ಕಸಿದುಕೊಂಡಿದ್ದರಂತೆ!) ಈ ಅಕ್ಕ–ತಂಗಿಯ ಕಹಿ ಸಿಹಿ ಸಂಬಂಧದ ಕಥೆಯನ್ನು ಇಟ್ಟುಕೊಂಡೇ 'ಸಾಝ್' ಎನ್ನುವ ಸಿನಿಮಾ ಬಂದಿತ್ತು. 1950ರಲ್ಲಿ ಹಾಡಲು ಶುರು ಹಚ್ಚಿದ ಆಶಾ ಅವರಿಗೆ ಮೊತ್ತಮೊದಲ ಫಿಲಂಫೇರ್ ಅತ್ಯುತ್ತಮ ಗಾಯಕಿ ಪ್ರಶಸ್ತಿ ಬಂದದ್ದು 1974ರಲ್ಲಿ ಎಂದರೆ ಆಗಿನ ಸ್ಪರ್ಧೆಯನ್ನು ಲೆಕ್ಕ ಹಾಕಬಹುದು.

ಈಗ 83ರ ಹರೆಯದಲ್ಲಿ ಆಶಾ ಒಬ್ಬ ಸಂತೃಪ್ತ ಸೆಲೆಬ್ರಿಟಿ. 1980ರಲ್ಲಿ ಸಂಗೀತ ನಿರ್ದೇಶಕ ಆರ್.ಡಿ.ಬರ್ಮನ್ ಅವರನ್ನು ಮದುವೆಯಾದದ್ದು ಜೀವನದ ಅತಿದೊಡ್ಡ ತಿರುವು. ಅದು ಆರ್‌ಡಿ ಅವರಿಗೂ ಎರಡನೇ ಮದುವೆ. ಇಬ್ಬರ ಸಮಾಗಮದಲ್ಲಿ ಹಿಂದಿ ಚಿತ್ರರಂಗದ ಅತ್ಯುತ್ತಮ ಹಾಡುಗಳು ಬಂದವು. ಅವರ 'ಸ್ಟೇಜ್ ಷೋ' ಈಗಲೂ ಅಪಾರ ಅಭಿಮಾನಿಗಳನ್ನು ಆಕರ್ಷಿಸುತ್ತದೆ. 2000ದಲ್ಲಿ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಬಂತು. 2008ರಲ್ಲಿ ಪದ್ಮವಿಭೂಷಣ ಸಿಕ್ಕಿತು. 2013ರಲ್ಲಿ ಸ್ವತಃ ಮಾಯಿ ಎಂಬ ಮರಾಠಿ ಸಿನಿಮಾದಲ್ಲಿ ಹೀರೋಯಿನ್ ಆದರು. ಆರ್.ಡಿ. ಬರ್ಮನ್ ಮತ್ತು ಓ.ಪಿ.ನಯ್ಯರ್ ಸಂಗೀತ ನಿರ್ದೇಶನದಲ್ಲಿ ಆಶಾ ದೀದಿ ಹಾಡಿರುವ ಹಾಡುಗಳು ಇವತ್ತಿಗೂ ಸೂಪರ್‌ಹಿಟ್.

ಹಾಗೆಂದು ಎರಡನೆಯ ಮದುವೆ ಬಳಿಕ ಎಲ್ಲವೂ ಸುಖಮಯವಾಗಿತ್ತು ಎಂದಲ್ಲ. ಆರ್.ಡಿ.ಬರ್ಮನ್ ನಿಧನರಾದ ಬಳಿಕ ಇನ್ನಷ್ಟು ವೈಯಕ್ತಿಕ ದುಃಖಗಳು ಆಶಾ ಅವರ ಬೆನ್ನತ್ತಿ ಬಂದವು. ಪತ್ರಕರ್ತೆಯಾಗಿದ್ದ ಮಗಳು ವರ್ಷಾ, ಮನೆಯಲ್ಲಿ ಒಬ್ಬಂಟಿಯಾಗಿದ್ದಾಗ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಆಗ ಆಶಾ ಮಗನ ಜತೆಗೆ ಸಿಂಗಾಪುರ ಪ್ರವಾಸದಲ್ಲಿದ್ದರು. ಮದುವೆಯಾಗಿ 98ರಲ್ಲಿ ಗಂಡನನ್ನು ತೊರೆದಿದ್ದ ವರ್ಷಾ ಖಿನ್ನತೆಗೆ ಒಳಗಾಗಿದ್ದಳು. ಅಮ್ಮ ಪಕ್ಕದಲ್ಲಿ ಇದ್ದರೆ ಮಾತ್ರ ಈ ಖಿನ್ನತೆಯಿಂದ ಪಾರಾಗಲು ಸಾಧ್ಯವಾಗುತ್ತಿತ್ತಂತೆ. ಕೆಲವು ವರ್ಷಗಳ ಬಳಿಕ ಆಶಾ ಅವರ ಮೊದಲ ಮಗ ಹೇಮಂತ್ ಕ್ಯಾನ್ಸರ್‌ಗೆ ಬಲಿಯಾದ. ಈ ಎಲ್ಲ ದುಃಖಗಳನ್ನು ನುಂಗಿಕೊಂಡೇ ಆಶಾ ಅವರ ಮಧುರ ಕಂಠ ನೂರಾರು ಹಾಡುಗಳಿಗೆ ಜೀವಕೊಟ್ಟಿದೆ.

ಕಳೆದ 66 ವರ್ಷಗಳಿಂದಲೂ ಹಾಡುತ್ತಿರುವ ಆಶಾಜಿ ಜೀವನ ಕುರಿತ ಸಿನಿಮಾವೊಂದಕ್ಕೆ ಈಗ ಸಿದ್ಧತೆ ನಡೆದಿದೆ. 'ನಿಮ್ಮ ಪಾತ್ರವನ್ನು ನಿರ್ವಹಿಸಲು ಯಾವ ನಟಿ ಸೂಕ್ತ?' ಎಂದು ಪತ್ರಕರ್ತರು ಕೇಳಿದರೆ, 'ಪ್ರಿಯಾಂಕಾ ಚೋಪ್ರಾಳೇ ಸರಿ. ಆಕೆಯ ಗಾಯಕಿಯೂ ಹೌದು. ಒಬ್ಬ ಗಾಯಕಿ ಮಾತ್ರ ಇನ್ನೊಬ್ಬ ಗಾಯಕಿಯ ನೋವು ನಲಿವುಗಳನ್ನು ಅರ್ಥ ಮಾಡಿಕೊಳ್ಳಬಲ್ಲಳು' ಎಂದಿದ್ದಾರೆ ಆಶಾ!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65